ಶ್ರೀ ಜೆ. ಎಲ್. ಕಡಾಡಿ.—ನಿಮ್ನ ವರ್ಗದ ವಿದ್ಯಾರ್ಥಿನಿಲಯ ಕಟ್ಟುವುದಕ್ಕೋಸ್ಕರ ಲೋಕೋಪಯೋಗಿ ಇಲಾಖೆಯಿಂದ ಹೊರತುಪಡಿಸಿ, ಸಮಾಜಕಲ್ಯಾಣ ಇಲಾಖೆ ಖಾತೆಯ ಹಣದಿಂದ ಇದನ್ನು ಕಟ್ಟಲಿಕ್ಕೆ ಮಾಡಿದ್ದೇವೆಂದು ಹೇಳಿದ್ದೀರಿ. ಲೋಕೋಪಯೋಗಿ ಇಲಾಖೆ ಖರ್ಚು ಮಾಡತಕ್ಕ ಹಣವನ್ನು ಸಾಕಷ್ಟು ಸರಿಯಾದ ರೀತಿಯಲ್ಲಿ ವಿನಿಯೋಗಿಸದೆ ಹಾಸ್ಟೆಲ್ ಸರಿಯಾದ ರೀತಿಯಲ್ಲಿ ಕಟ್ಟಲಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ರಾಚಯ್ಯ. ಬಂದಿಲ್ಲ, ಬಂದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ.—ನಾನು ನಚಿಕೇತನಿಲಯದ ಅಡ್ಮಿನಿಸ್ಟ್ರೇಷನ್ ಕಮಿಟಿಗೆ ಛೇರ್ಮನ್ ಆಗಿದ್ದೇನೆ. ಅನೇಕ ಜನರಿಗೆ ಅಲ್ಲಿ ಸ್ಥಳಾವಕಾಶವಿಲ್ಲದೆ ರಿಸ್ಟ್ರಿಕ್ಟ್ ಮಾಡಬೇಕಾಗಿ ಬಂದಿದೆ. ಈಗಿರುವ ಕಟ್ಟಡ ಸಾಲದು. ಹೆಚ್ಚಿಗೆ ಕಟ್ಟಡ ಕಟ್ಟಿಸಿ ಆ ಜನಕ್ಕೆ ಅನುಕೂಲ ಮಾಡುತ್ತೀರಾ ?

ಶ್ರೀ ಎನ್. ರಾಚಯ್ಯ.—ಅಗತ್ಯವಿದ್ದರೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ. ಸಾಮಾನ್ಯವಾಗಿ ಹೋಬಳಿ ಮತ್ತು ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿ 20 ಮಕ್ಕಳು ಇರುತ್ತಾರೆ ಅಂಥ ಕಡೆ ಅಗತ್ಯವಿರುವುದಿಲ್ಲವೆಂದು ಅನ್ನಿಸುತ್ತದೆ.

ಶ್ರೀ ಕೆ. ಸಿದ್ದಯ್ಯ.—ಡಿಪ್ರೆಸ್ಡ್ ಕ್ಲಾಸ್ ಹಾಸ್ಟೆಲಿಗೆ ಸೇರಿಸಬೇಕಾದರೆ, ಷೆಡ್ಯೂರ್ಡ್ ಕ್ಯಾಸ್ಟ್‌ಗೆ 0 ಪರ್ಸೆಂಟ್ ಕೊಡಬೇಕು ಎಂದು ಇದೆ. ಇನ್ನು 10 ಪರ್ಸೆಂಟ್ ನಾನ್ ಷೆಡ್ಯೂರ್ಡ್ ಕ್ಯಾಸ್ಟ್‌ಗೆ ಕೊಡಬೇಕು ಎನ್ನುವುದು ಅಷ್ಟಕ್ಕೇ ಕನ್‌ಫೈನ್ ಮಾಡುತ್ತೀರಾ.

ಶ್ರೀ ಎನ್. ರಾಚಯ್ಯ.—ಅದನ್ನು ಪರಿಶೀಲನೆ ಮಾಡುತ್ತೇನೆ.

BUILDING FOR NURSERY, HOME-*CUM*-WOMEN WELFARE CENTRE AT SADALGA TOWN.

346. Sri P. P. HEGRE (Chikodi).—

Will the Minister for Community Development and Social Welfare be pleased to state :—

(*a*) whether a Community Centre Building for Scheduled Castes has been sanctioned for Sadalga town in Chikodi taluk of Belgaum district and that the amount sanctioned for it is Rs. 5,000 ;

(*b*) whether a Nursery, Home-*cum*-Women Welfare Centre has also been sanctioned for that town (for Scheduled Castes) ;

(*c*) whether Government proposes to sanction a suitable building for the Nursery, Home-*cum*-Women Welfare Centre or grant already sanctioned (Rs. 5,000) for the Community Centre building ?

Sri N. RACHAIAH (Minister for Community Development and Social Welfare).—

(*a*) Yes.

(*b*) A Women Welfare Centre has been sanctioned.

(*c*) No.

ಶ್ರೀ ಪಿ. ಪಿ. ಹೆಗಡೆ.—ಸ್ಥಾಪನೆ ಸದಲಗ ಗ್ರಾಮದಲ್ಲಿ ಶಿಶುವಿಹಾರ ಹಾಗೂ ಮಹಿಳಾ ಕಲ್ಯಾಣ ಕೇಂದ್ರಕ್ಕೆ ನೂಕ್ಕಪಾದ ಕಟ್ಟಡವೊಂದನ್ನು ಮಂಜೂರ್ಮಾಡಲು ಉದ್ದೇಶಿಸಿರುವರೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿದ್ದೀರಿ. ಮಹಿಳಾ ಕಲ್ಯಾಣ ಕೇಂದ್ರವನ್ನು ಎಲ್ಲಿ ನಡೆಸಬೇಕು ?

†ಶ್ರೀ ಎನ್. ರಾಚಯ್ಯ.—ಅಗತ್ಯ ಕಂಡು ಬಂದರೆ ಮಂಜೂರು ಮಾಡುತ್ತೇವೆ,

ಶ್ರೀ ಪಿ. ಪಿ. ಹೆಗಡೆ.—ನಾನು ಕೇಳಿದ ಉದ್ದೇಶವಿದು, ಸದಲಗ ಗ್ರಾಮದಲ್ಲಿ ಮಹಿಳಾ ಕಲ್ಯಾಣಕೇಂದ್ರ ಮಂಜೂರುಮಾಡಿದ್ದೀರಿ, ಕಟ್ಟಡ ಇಲ್ಲ. ಆ ಕಟ್ಟಡದ ನಲುವಾಗಿ ಈ ವರ್ಷದ ಬಡ್ಜೆಟ್‌ನಲ್ಲಿ ಸಾಕಷ್ಟು ಹಣ ಮಂಜೂರು ಮಾಡುತ್ತೀರಾ ?

ಶ್ರೀ ಎನ್. ರಾಚಯ್ಯ.— ಮುಂದಿನ ವರ್ಷದ ಬಡ್ಜೆಟ್‌ನಲ್ಲಿ ಅಗತ್ಯವಾಗಿ ಕಟ್ಟಡಕ್ಕೆ ಹಣವನ್ನು ಮಂಜೂರು ಮಾಡಿಕೊಡುತ್ತೇವೆ.

IRREGULAR PAYMENT OF SALARY TO THE STAFF OF BUNTWAL TALUK HOSPITAL.

348. Sri B. V. KAKKILAYA (Buntwal) .—

Will the Minister for Health be pleased to state :—

(*a*) when the Buntwal taluk Hospital was taken over by the Government from the Taluk Development Board;

(*b*) whether the staff of the Hospital every now and then experience difficulty in getting salary regularly for want of Government sanction and provision in the annual budget;

(*c*) the steps taken by Government to see that the staff get their salary regularly ?

Sri H. SIDDAVEERAPPA (Minister for Health) .—

(*a*) On 1st October 1970.

(*b*) No.

(*c*) Does not arise.

ಶ್ರೀ ಎಂ. ಎಸ್. ಕೃಷ್ಣನ್.—ಸಂಬಂಧಪಟ್ಟ ಅಲ್ಲಿನ ಪ್ರಮುಖರು ಎಂ. ಎಲ್. ಎ. ಅವರು ಸರ್ಕಾರದ ಗಮನಕ್ಕೆ ತೆಗೆದುಕೊಂಡು ಬಂದು, ಈ ರೀತಿ ವೇತನ ಪಡೆಯುತ್ತಾ ಇಲ್ಲ. ತೊಂದರೆ ಯಾಗುತ್ತಿದೆಯೆಂದು ಬರೆದರೆ, ನಮುಂಜನವಾಗಿ ಉತ್ತರ ಕೊಡುತ್ತೇನೆಂದು ಹೇಳಿಲ್ಲವೆ? ಆ ಪ್ರಶ್ನೆಗೆ ಉತ್ತರ ಇಲ್ಲ ಎಂದು ಹೇಳಿದ್ದೀರಿ. ಅದಕ್ಕೂ ಇದಕ್ಕೂ ವಿರೋಧಭ್ಯಾಸವಾಗುವುದಿಲ್ಲವೇ ?

† ಶ್ರೀ ಎಚ್. ಸಿದ್ದವೀರಪ್ಪ.—ಅವರು ಸಂಬಳ ಸಾರಿಗೆ ಪಡೆಯುವಲ್ಲಿ ಸಾಕಷ್ಟು ತೊಂದರೆ ಯಾಗಿದೆಯೇ ಎಂದು ಕೇಳಿದ್ದೀರಿ, ಅದಕ್ಕೆ ಇಲ್ಲ ಎಂದು ಹೇಳಿದ್ದೇವೆ. ಅಲ್ಲಿ ಏನಾಗಿದೆಯೆಂದರೆ, ತಾಲ್ಲೂಕು ಬೋರ್ಡ್ ಕಾಂಟ್ರಿಬ್ಯೂಷನ್ ವಿಚಾರದಲ್ಲಿ ಅವರು ಸರಿಯಾದ, ನಿಖರವಾದ ಜವಾಬು ಕೊಟ್ಟಿಲ್ಲ. ಅಕೌಂಟೆಂಟ್ ಜನರಲ್ ಫೈನಲ್ ಆರ್ಡರ್ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾ ಇದ್ದಾರೆ. ಆದರೂ ಲೋಕರ್‌ಬೋರ್ಡ್ ಆದಷ್ಟು ಬೇಗ ಒಂದು ತೀರ್ಮಾನ ಹೇಳಿದರೆ ಅದನ್ನು ರೆಗ್ಯುಲರೈಸ್ ಮಾಡುವುದಕ್ಕೆ ಸರಿಹೋಗುತ್ತದೆ, ಆದುದರಿಂದ ಇಲ್ಲಿಯವರಿಗೆ ಪ್ರೊವಿಜನರ್ ಅಥರೈಸೇಷನ್ ಇಷ್ಯೂ ಮಾಡುತ್ತಾ ಇದ್ದೇವು. ಇದು ಮೊನ್ನೆ 28-2-1974 ರಂದು ಎಕ್ಸ್‌ಟ್ರೆಮ್ಲಿ ಅರ್ಜೆಂಟ್ ಮೇಲೆ ಸರ್ಕಾರದವರು ಕಾಗದ ಬರೆದು, ರೆಗ್ಯುಲರೈಸ್ ಆಗುವವರೆಗೆ ಇನ್ನೂ ಆರು ತಿಂಗಳು ಕಂಟಿನ್ಯೂ ಮಾಡಿ ಎಂದು ಎ.ಜಿ.ಯವರಿಗೆ ಪ್ರಾರ್ಥನೆ ಮಾಡಿಕೊಂಡಿದ್ದೇವೆ.